# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ. 1776/2025**
**ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 2**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಹೊನ್ನಪ್ಪ ವೆಂಕಟ ನಾಯ್ಕ** |
| **ತಂದೆಯ ಹೆಸರು** | : | **ವೆಂಕಟ ನಾಯ್ಕ** |
| **ವಯಸ್ಸು** | : | **38 ವರ್ಷ** |
| **ಉದ್ಯೋಗ** | : | **ಶಿಲ್ಪಿ ಕೆಲಸ** |
| **ವಾಸ** | : | **ಮಾಳುಗದ್ದೆ, ಬಸ್ತಿ, ಕಾಯ್ಕಿಣಿ** |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 25-10-2025**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದಃ-**

ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ ಅದು ಘಟನಾ ಸ್ಥಳದ ಪಂಚನಾಮೆ ಮತ್ತು ನಕ್ಷೆ ಇದ್ದು, ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-2 ಮತ್ತು ನಿಪಿ-3 ಕ್ಕೆ ದಿನಾಂಕ 28.05.2025 ರಂದು ಬಸ್ತಿ ಪಂಚಾಯತಿ ಕ್ರಾಸ್ ಹತ್ತಿರ ಒಂದು ಕೆ ಎಸ್ ಆರ್ ಟಿ ಸಿ ಬಸ್ಸ ವೇಗವಾಗಿ ಬಂದು ಒಬ್ಬ ಮಹಿಳೆ ರಸ್ತೆ ದಾಟುತ್ತಿದ್ದಾಗ ಡಿಕ್ಕಿಪಡಿಸಿ ಅಪಘಾತಪಡಿಸಿದ ವಿಚಾರವಾಗಿ ಪಂಚನಾಮೆ ಮಾಡಿದ್ದಕ್ಕೆ ಸಹಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ-3 ರವರು ಸಹಿ ಮಾಡಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಮೂರು ಫೋಟೊ ತೆಗೆದಿರುತ್ತಾರೆ. ಸದ್ರಿ ಫೋಟೊಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ ನಿಪಿ-6 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯವರೆಗೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಹೆಚ್.ಎನ್. ವಕೀಲರಿಂದಃ**

ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ. ಅಪಘಾತ ಸ್ಥಳವನ್ನು ನನಗೆ ಯಾರೂ ತೋರಿಸಿರುವುದಿಲ್ಲ. ಅಪಘಾತ ಆದಾಗ ನಾನು ಅಲ್ಲೇ ಇದ್ದೆನು. ಅಪಘಾತವನ್ನು ನಾನು ಕಣ್ಣಾರೆ ನೋಡಿದ್ದೇನೆ ಎಂದು ಪೊಲೀಸರಿಗೆ ತಿಳಿಸಿರುತ್ತೇನೆ. ಅಪಘಾತವು ಮೃತ ಮಹಿಳೆ ಹಠಾತ್ತಾಗಿ ರಸ್ತೆ

ದಾಟುತ್ತಿದ್ದಾಗ ಆಗಿರುತ್ತದೆ ಎಂದರೆ ಸರಿ. ಅಪಘಾತ ಸ್ಥಳವು ಉತ್ತರ ದಕ್ಷಿಣವಾಗಿ ಇದೆ ಎಂದರೆ ಸರಿ. ಉತ್ತರ ಎಂದರೆ ಮುರ್ಡೇಶ್ವರ, ದಕ್ಷಿಣ ಅಂದರೆ ಭಟ್ಕಳ. ಅಪಘಾತ ಆದ ರಸ್ತೆಯು ಚತುಸ್ಪದವಾಗಿದೆ, ಒಂದು ಪಥದಲ್ಲಿ ಎರಡು ರಸ್ತೆಗಳು ಇರುತ್ತವೆ. ಮುರ್ಡೇಶ್ವರದಿಂದ ಭಟ್ಕಳದ ಕಡೆಗೆ ವಾಹನಗಳು ಪೂರ್ವ ಬದಿಯ ರಸ್ತೆಯಿಂದ ಬರಬೇಕಾಗುತ್ತದೆ, ಭಟ್ಕಳದಿಂದ ಮುರ್ಡೇಶ್ವರಕ್ಕೆ ಹೋಗುವ ವಾಹನಗಳು ಪಶ್ಚಿಮ ಬದಿಯ ರಸ್ತೆಯಿಂದ ಬರಬೇಕಾಗುತ್ತದೆ ಎಂದರೆ ಸರಿ. ಆಪಾದಿತ ಬಸ್ಸ ತನ್ನ ಸರಿಯಾದ ಪಥದಲ್ಲೇ ಬರುತ್ತಿತ್ತು. ಮೃತಳು ಪಶ್ಚಿಮ ಬದಿಯಿಂದ ಪೂರ್ವ ಬದಿಯ ರಸ್ತೆ ದಾಟುತ್ತಿದ್ದಳು.

ಪಂಚನಾಮೆಯನ್ನು ಅಪಘಾತ ಆದ ಎರಡು ದಿನಗಳ ನಂತರ ಮಾಡಲಾಗಿರುತ್ತದೆ. ಅಪಘಾತ ಆದ ಸ್ಥಳದಲ್ಲಿ ಯಾವುದೇ ಗುರುತು ಮಾಡಿರಲಿಲ್ಲ. ಅಪಘಾತವು ರಾಷ್ಟ್ರೀಯ ಹೆದ್ದಾರಿಯ ಪೂರ್ವ ಪಥದ ಮಧ್ಯದಲ್ಲಿ ಆಗಿರುತ್ತದೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ, ಅದಕ್ಕಾಗಿ ಸದ್ರಿ ವಿಚಾರವನ್ನು ಪಂಚನಾಮೆಯಲ್ಲಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಗೆ ನಾನು ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಕೈಬರಹದಲ್ಲಿ ಬರೆದಿರುತ್ತಾರೆ. ಈ ದಿನ ತೋರಿಸಿದ ನಿಪಿ–2 ಪಂಚನಾಮೆ ಕಂಪ್ಯೂಟರ್ ನಲ್ಲಿ ತಯಾರಿಸಿದ ಪ್ರತಿಯಾಗಿರುತ್ತದೆ. ಪೊಲೀಸರು ಒಟ್ಟು ಮೂರು ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಮೃತಳ ಕುಟುಂಬವರಿಗೆ ಪರಿಹಾರ ಸಿಗಲೆಂದು ಪೊಲೀಸರು ಠಾಣೆಯಲ್ಲಿ ತಯಾರಿಸಿದ ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–4 ರಿಂದ ನಿಪಿ–6 ಸುಳ್ಳು ಸೃಷ್ಟಿ ಮಾಡಿಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ.**